
# ನಮ್ಮ ಸಂಸ್ಕೃತಿ ಪರಿಚಯ – ೩

*ಇಂಗ್ಲಿಷ್ ಮೂಲ* : **ಸೀತಾ ಲಖಾನಿ** ; *ಕನ್ನಡ ರೂಪಾಂತರ* : **ಡಾ. ಕೆ.ಎಲ್ ಪ್ರಸನ್ನಾಕ್ಷಿ**

**ದೇವರು :** ಇರುವುದು ಒಬ್ಬನೇ ದೇವರು. ದೇವರನ್ನು ಜನರು ತಮ್ಮ ತಮ್ಮ ಭಾವಕ್ಕೆ ತಕ್ಕಂತೆ ಬೇರೆಬೇರೆಯಾಗಿ ಭಾವಿಸುತ್ತಾರೆ. ಬಹಳ ಜನರು ದೇವರನ್ನು ಮೇಲೆ ಇರುವ ಯಾವುದೋ ಲೋಕದಲ್ಲಿ ನೆಲೆಸಿರುವ ತಂದೆಯಂತೆ ಭಾವಿಸುತ್ತಾರೆ. ಇನ್ನು ಕೆಲವರು ದೇವರನ್ನು 'ತಾಯಿ'ಯೆಂದು ಭಾವಿಸುತ್ತಾರೆ. ಮತ್ತೆ ಕೆಲವರು ದೇವರನ್ನು 'ತಂದೆ'ಯೆಂದು ಆರಾಧಿಸುತ್ತಾರೆ. ಹಲವು ಜನ ದೇವರನ್ನು ಸಣ್ಣ ಮಗುವಿನ ರೂಪದಲ್ಲಿ ಕೂಡ ಧ್ಯಾನಿಸುತ್ತಾರೆ. ದೇವರನ್ನು ಸೇರುವುದಕ್ಕೆ ಹಲವಾರು ಮಾರ್ಗಗಳಿವೆ ಎಂದು ಹಿಂದೂಧರ್ಮ ಹೇಳುತ್ತದೆ. ದೇವರು ಒಬ್ಬನಾದರೂ, ಅವನಿಗೆ ಬೇರೆ ಬೇರೆ ಹೆಸರುಗಳನ್ನು ಕೊಡಬಹುದು. ಅವನನ್ನು ಚಿಂತಿಸಲು ಹಲವು ಭಾವಗಳಿವೆ. ಇದನ್ನೇ ಅನೇಕದೇವತಾವಾದ (Pluralism) ಎಂದು ಕರೆಯುತ್ತಾರೆ. ಇದರ ಪ್ರಕಾರ ಬೇರೆ ಬೇರೆ ಮತಗಳು, ದೇವರನ್ನು ಸೇರಲು ಇರುವ ಬೇರೆ ಬೇರೆ ದಾರಿಗಳಷ್ಟೇ.

**ನಮ್ಮ ಅಮ್ಮನೇ ಶ್ರೇಷ್ಠ :** ಇಬ್ಬರು ಹುಡುಗರಿದ್ದರು. ಅವರು ಪರಸ್ಪರ ತುಂಬ ಅನ್ಯೋನ್ಯವಾಗಿದ್ದರು. ಅವರಿಗೆ ಫುಟ್‌ಬಾಲ್ ಆಟ ಎಂದರೆ ತುಂಬ ಇಷ್ಟ. ಪ್ರತಿದಿನ ಅವರು ಫುಟ್‌ಬಾಲ್ ಆಟ ಆಡುತ್ತಿದ್ದರು. ಒಂದು ದಿನ ಆಟವಾಡುತ್ತಿದ್ದಾಗ, ಒಬ್ಬ ಹುಡುಗ ಹೇಳಿದ, "ಇಡೀ ಪ್ರಪಂಚದಲ್ಲಿ ನಮ್ಮ ಅಮ್ಮನೇ ಶ್ರೇಷ್ಠ." ಇನ್ನೊಬ್ಬ ಹುಡುಗ ಅದನ್ನು ಒಪ್ಪಿಕೊಳ್ಳಲಿಲ್ಲ. ಮೊದಲ ಹುಡುಗ ಹೇಳಿದ, "ಇಲ್ಲ, ಇಲ್ಲ. ನೀನು ಹೇಳುತ್ತಿರುವುದು ಸುಳ್ಳು. ನಿಮ್ಮ ಅಮ್ಮ ಮಾಡಿದ ರವೆ ಉಂಡೆ ಹೋದ ವಾರ ನೀನು ತಂದಿದ್ದೆ. ಅದು ಸ್ವಲ್ಪವೂ ಚೆನ್ನಾಗಿರಲಿಲ್ಲ. ಕಲ್ಲಿನಂತೆ ಗಟ್ಟಿಯಾಗಿತ್ತು. ನಿಮ್ಮಮ್ಮ ಹೆಚ್ಚಿನವರಲ್ಲ, ನಮ್ಮಮ್ಮನೇ ಶ್ರೇಷ್ಠ." – ಹೀಗೆ ಮಾತು ಮುಂದುವರಿಯಿತು. ದೊಡ್ಡ ಜಗಳವೇ ಆಯಿತು. ಇಬ್ಬರೂ ಹೊಡೆದಾಡಲು ಆರಂಭಿಸಿದರು. ಇಬ್ಬರಿಗೂ ಮೈಯೆಲ್ಲಾ ಗಾಯಗಳೂ ಆದವು.




*ಚಿತ್ರ* : ವಿವೇಕ ಪ್ರಭು

ಈ ಮಧ್ಯೆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಹಿರಿಯರು ಅಲ್ಲಿಗೆ ಬಂದರು. ಹೊಡೆದಾಟಕ್ಕೆ ಕಾರಣವನ್ನು ಕೇಳಿದರು. ಇಬ್ಬರು ಹುಡುಗರೂ ನಡೆದದ್ದನ್ನು ವಿವರಿಸಿದರು. ಆಗ ಆ ಹಿರಿಯರು ಹೇಳಿದರು, "ಹೌದು, ನಿಮ್ಮ ಅಮ್ಮ ನಿಮಗೆ ಶ್ರೇಷ್ಠ. ಇನ್ನು ಮುಂದೆ 'ನನ್ನ ಅಮ್ಮನೇ ಶ್ರೇಷ್ಠ' ಎಂದು ಹೇಳಬೇಡಿ. 'ನನ್ನ ಅಮ್ಮ ನನಗೆ ಶ್ರೇಷ್ಠ' ಎಂದು ಹೇಳಿಕೊಳ್ಳಿ, ಈ ಬಗೆಯ ಭಾವನೆ ಇಟ್ಟುಕೊಂಡರೆ, ನೀವು ಜಗಳವಾಡುವುದಿಲ್ಲ, ಹೊಡೆದಾಡಿಕೊಳ್ಳುವುದಿಲ್ಲ."

ಆ ಹುಡುಗರು ಅಂದುಕೊಂಡದ್ದೂ ಅದನ್ನೇ. ಆದರೆ ಅದನ್ನು ಸರಿಯಾದ ರೀತಿಯಲ್ಲಿ ಪ್ರಕಟಗೊಳಿಸಲು ಅವರಿಗೆ ಸಾಧ್ಯವಾಗಿರಲಿಲ್ಲ, ಅಷ್ಟೆ. ಈ ಕಾರಣದಿಂದಲೇ, ಆ ಹಿರಿಯ ವ್ಯಕ್ತಿಗಳು ನೀಡಿದ ಉಪದೇಶ ಅವರಿಗೆ ತುಂಬ ಮೆಚ್ಚುಗೆ ಆಯಿತು. ಹೌದು, ಅವರವರ ತಾಯಿ ಅವರವರಿಗೆ ಶ್ರೇಷ್ಠ ಎಂದು ಆ ಹುಡುಗರಿಬ್ಬರೂ ತಿಳಿದುಕೊಂಡರು. ಜಗಳ ನಿಲ್ಲಿಸಿ, ಮತ್ತೆ ಸ್ನೇಹಿತರಾದರು. ಮತ್ತೆ ಮೊದಲಿನಂತೆ ಫುಟ್‌ಬಾಲ್ ಆಟ ಆಡಲು ಆರಂಭಿಸಿದರು. ಕೊನೆಯವರೆಗೂ ಆತ್ಮೀಯ ಗೆಳೆಯರಾಗಿದ್ದರು.

ಇದನ್ನೇ ನಾವು ದೇವರ ವಿಷಯಕ್ಕೂ ಅನ್ವಯಿಸಬೇಕು. ನಾವೆಲ್ಲರೂ, "ನಮ್ಮ ದೇವರು ಶ್ರೇಷ್ಠ, ನಮ್ಮ ಮತವೇ ಶ್ರೇಷ್ಠ" ಎಂದು ಹೇಳಿಕೊಳ್ಳಬಹುದು. ಆದರೂ ಆ ಮತವೇ ಬೇರೆಲ್ಲ ಮತಗಳಿಂತ ಶ್ರೇಷ್ಠ ಎಂದು ಅಂದುಕೊಳ್ಳಬಾರದು. "ನನಗೆ ನನ್ನ ದೇವರು ಶ್ರೇಷ್ಠ, ಹಾಗೆಯೇ ಬೇರೆಯವರಿಗೆ ಅವರ ದೇವರು ಶ್ರೇಷ್ಠ; ನನಗೆ ನನ್ನ ಮತ ಶ್ರೇಷ್ಠ, ಹಾಗೆಯೇ ಬೇರೆಯವರಿಗೆ ಅವರ ಮತ ಶ್ರೇಷ್ಠ" ಎಂಬ ಭಾವನೆ ನಮ್ಮಲ್ಲಿ ಇರಬೇಕು. ಇದನ್ನೇ ಶ್ರೀರಾಮಕೃಷ್ಣರು ಉಪದೇಶ ಮಾಡಿದ್ದು.

ಸ್ವಾಮಿ ವಿವೇಕಾನಂದರು ೧೮೯೩ ರಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಈ ಸಂದೇಶವನ್ನೇ ಸಾರಿದರು. ಎಲ್ಲ ಮತಗಳೂ ದೇವರನ್ನು ಸೇರಲು ಇರುವ ಬೇರೆ ಬೇರೆ ದಾರಿಗಳು. ಯಾವ ಮತವೂ ಶ್ರೇಷ್ಠವಲ್ಲ, ಕಡಮೆಯೂ ಅಲ್ಲ. ಇದೇ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಸಂದೇಶದ ತಿರುಳು. •